(2)

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:**–ಶ್ರೀ ಜಿ.ಜೆ.ನಾಯ್ಕ, ನಿವೃತ್ತ ಕೃಷಿ ಸಹಾಯಕ, ಇವರ ನಿವೃತ್ತಿ ಸೌಲಭ್ಯಗಳನ್ನು ವಿಳಂಬವಾಗಿ ಪಾವತಿಸಿರುವುದಕ್ಕೆ ಬಡ್ಡಿಯನ್ನು ಪಾವತಿಸಲು ಅನುಮತಿ ನೀಡುವ ಕುರಿತು.

**ಓದಲಾಗಿದೆ:**–

ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಇವರ ಪತ್ರ ಸಂಖ್ಯೆ:ಜಅಇ/ಆ–1 /ಕಾ.ಕೋಶ/ಅ.ಸಂ.1605/13/2013–14, ದಿನಾಂಕ:3/11–10–2013, 18–02–2014 ಮತ್ತು 17–09–2014.

**ಪ್ರಸ್ತಾವನೆ:**–

ಶ್ರೀ ಜಿ.ಜೆ.ನಾಯ್ಕ, ನಿವೃತ್ತ ಕೃಷಿ ಸಹಾಯಕರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಜಲಾನಯನ ಅಭಿವೃದ್ಧಿ ಇಲಾಖೆ, ಮುಂಡಗೋಡ ಉಪ ವಿಭಾಗ, ಕಾರವಾರ ಜಿಲ್ಲೆ, ಇವರು ದಿನಾಂಕ:30–09–2011ರಂದು ಸೇವೆಯಿಂದ ವಯೋ ನಿವೃತ್ತರಾಗಿರುತ್ತಾರೆ. ಶ್ರೀ ಜಿ.ಜೆ.ನಾಯ್ಕ ಇವರು ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿದ್ದಾರೆಂದು ಆರೋಪಿಸಿ ಜಿಲ್ಲಾ ಮತ್ತು ಅಧೀನ ನ್ಯಾಯಾಲಯದಲ್ಲಿ ಲೋಕಾಯುಕ್ತ ವಿಶೇಷ ಪ್ರಕರಣ ಸಂಖ್ಯೆ:02/2004 ದಾಖಲಾಗಿದ್ದುದರಿಂದ ಇವರ ನಿವೃತ್ತ ಸೌಲಭ್ಯಗಳನ್ನು ತಡೆಹಿಡಿಯಲಾಗಿತ್ತು. ನಂತರ ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:10–09–2012ರಲ್ಲಿ ಇವರನ್ನು ಆರೋಪ ಮುಕ್ತಗೊಳಿಸಿ ಆದೇಶ ನೀಡಿರುತ್ತದೆ. ವಿಶೇಷ ಸರ್ಕಾರಿ ಅಭಿಯೋಜಕರು, ಕಾರವಾರ ಇವರು ತೀರ್ಪಿನ ಪ್ರಕರಣವು ಮೇಲ್ಮನವಿಗೆ ಯೋಗ್ಯವಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ. ನ್ಯಾಯಲಯದ ಮೇಲ್ಕಂಡ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಅಗತ್ಯವಿಲ್ಲವೆಂದು ಸರ್ಕಾರವು ದಿನಾಂಕ:17–10–2013ರ ಪತ್ರದಲ್ಲಿ ತಿಳಿಸಿರುವುದರಿಂದ ಹಾಗೂ ನ್ಯಾಯಾಲಯವು ಇವರನ್ನು ದೋಷಮುಕ್ತರನ್ನಾಗಿಸಿರುವುದರಿಂದ, ಕೃಷಿ ನಿರ್ದೇಶಕರು ಇವರ ಮೇಲಿನ ಆರೋಪಗಳಿಂದ ಮುಕ್ತಗೊಳಿಸಿ ದಿನಾಂಕ:03–03–2014ರಂದು ಆದೇಶ ಹೊರಡಿಸಿರುತ್ತಾರೆ. ಇದರ ಆಧಾರದ ಮೇಲೆ ಮಹಾಲೇಖಪಾಲರು ದಿನಾಂಕ:19–03–2013ರಂದು ನಿವೃತ್ತಿ ಸೌಲಭ್ಯಗಳನ್ನು ನೌಕರರಿಗೆ ಬಿಡುಗಡೆ ಮಾಡಿರುತ್ತಾರೆ. ನ್ಯಾಯಾಲಯ ಪ್ರಕರಣದಲ್ಲಿ ಶ್ರೀ ಜಿ.ಜೆ.ನಾಯ್ಕ ಇವರು ದೋಷಮುಕ್ತರಾಗಿರುವುದರಿಂದ ಮತ್ತು ಇಲಾಖಾ ವಿಚಾರಣೆಯಿಂದ ಹೊರತುಪಡಿಸಲಾಗಿರುವುರಿಂದ ವಿಳಂಬವಾಗಿ ಪಾವತಿಸಲಾದ ನಿವೃತ್ತಿ ಉಪದಾನ ರೂ.2,77,200–ಗಳಿಗೆ ಬಡ್ಡಿ ಹಣ ರೂ.25,872/–ಗಳನ್ನು ಪಾವತಿಸಲು ಸರ್ಕಾರದ ಮಂಜೂರಾತಿ ಆದೇಶ ನೀಡುವಂತೆ ಮೇಲೆ ಓದಲಾದ ಪತ್ರಗಳಲ್ಲಿ ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರು ಸರ್ಕಾರವನ್ನು ಕೋರಿರುತ್ತಾರೆ.

2. ಸರ್ಕಾರವು ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಶ್ರೀ ಜಿ.ಜೆ.ನಾಯ್ಕ, ಕೃಷಿ ಸಹಾಯಕರು, ಇವರಿಗೆ ವಿಳಂಬವಾಗಿ ಪಾವತಿಸಲಾದ ನಿವೃತ್ತಿ ಉಪದಾನಕ್ಕೆ ಬಡ್ಡಿಯನ್ನು ಮಂಜೂರು ಮಾಡಲು ತೀರ್ಮಾನಿಸಿದೆ. ಅದರಂತೆ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಕೃಇ 76 ಕೃವಸೆ 2013, ಬೆಂಗಳೂರು, ದಿನಾಂಕ:06–02–2015.**

3. ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ , ಶ್ರೀ ಜಿ.ಜೆ.ನಾಯ್ಕ, ನಿವೃತ್ತ ಕೃಷಿ ಸಹಾಯಕ, ಇವರಿಗೆ ವಿಳಂಬವಾಗಿ ಪಾವತಿಯಾದ ನಿವೃತ್ತಿ ಉಪದಾನದ ಮೊತ್ತ

....2

ರೂ.2,77,200/- ಮೇಲಿನ ಬಡ್ಡಿ ಹಣ ರೂ25,872/-(ಇಪ್ಪತ್ತೈದು ಸಾವಿರದ ಎಂಟು ನೂರ ಎಪ್ಪತ್ತೆರಡು ರೂಪಾಯಿಗಳು ಮಾತ್ರ) ಗಳನ್ನು ವಿಳಂಬಕ್ಕೆ ಕಾರಣರಾದವರಿಂದ ಸದರಿ ಬಡ್ಡಿ ಮೊತ್ತವನ್ನು ವಸೂಲಿ ಮಾಡುವ ಷರತ್ತಿಗೊಳಪಟ್ಟು ಪಾವತಿಸಲು ಸರ್ಕಾರದ ಮಂಜೂರಾತಿ ನೀಡಿದೆ.

4. ಈ ಆದೇಶವನ್ನು ಆರ್ಥಿಕ ಇಲಾಖೆ(ವಿಶ್ರಾಂತಿ ವೇತನ)ಯ ದಿನಾಂಕ:03-01-2015ರ ಟಿಪ್ಪಣಿ ಸಂಖ್ಯೆ:ಆಇ 176 ಪಿಇಎನ್1 2014ರಲ್ಲಿ ನೀಡಲಾದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

6/2/15

(ಎಸ್.ಆರ್.ಬಸವರಾಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ(ಸೇವೆಗಳು ಮತ್ತು ಸಮನ್ವಯ).

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು, (ಲೆಕ್ಕಪತ್ರ/ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಖಜಾನೆ, ಇಲಾಖೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
4) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು-9.
5) ಶ್ರೀ ಗೋವಿಂದರಾಜ ಜೆ.ನಾಯಕ, ಕೃಷಿ ಸಹಾಯಕ, ಅಣ್ಣಪ್ಪಸ್ವಾಮಿ ನಿಲಯ, ವಿವೇಕಾನಂದ ಶಾಲೆ ಎದುರು, ಕಾಳಮ್ಮನಗರ, ಯಲ್ಲಾಪುರ, ಉತ್ತರ ಕನ್ನಡ ಜಿಲ್ಲೆ
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.